ಕಾಳಗಕ್ಕೆ ಸಿದ್ಧವಾಯಿತು. ತನಗೆ ಅಭಿಮುಖವಾಗಿ ನಿಂತು, ಆರ್ಭಟಿಸುತ್ತ ತನ್ನತ್ತ ಹುಲಿ ನೆಗೆಯುತ್ತಿದ್ದಂತೆ ರಭಸದಿಂದ ಹಂದಿಯೂ ಮುನ್ನುಗ್ಗಿತ್ತು. ಹುಲಿ ಮೇಲೇರಿ, ಹಂದಿ ಮುಂದೆ ಬಂದಿದ್ದರಿಂದ ನೆಲದ ಮೇಲೆ ದೊಪ್ಪನೆ ಬಿತ್ತು. ಹಿಂದೆ ಬರುತ್ತಿದ್ದ ನರಿ ಹಂದಿಯ ಕೋರೆದಾಡೆಗಳಿಗೆ ಸಿಕ್ಕಿ ಕ್ಷಣಾರ್ಧದಲ್ಲಿ ಸತ್ತೇ ಹೋಯಿತು. ಅದನ್ನು ಕಂಡ ಹುಲಿ 'ಅಯ್ಯೋ ಸತ್ತೆ' ಎಂದು ಕಿರುಚುತ್ತಾ ಓಡತೊಡಗಿತು. ದುಗ್ಗನ ಹಂದಿಯೂ ತನ್ನವರೆಲ್ಲರನ್ನೂ ಕಟ್ಟಿಕೊಂಡು ಹುಲಿಯನ್ನು ಬೆನ್ನಟ್ಟಿತು. ಇನ್ನೇನು ಸಿಕ್ಕೇ ಬಿಟ್ಟಿತು ಎನ್ನುವಷ್ಟರಲ್ಲಿ, ಹುಲಿ ಎದುರಿಗೆ ಸಿಕ್ಕ ಮರವನ್ನು ಸರಸರ ಹತ್ತಿ 'ಬದುಕಿದೆ' ಎಂದು ಕೊಂಬೆಯೊಂದನ್ನು ಹಿಡಿದು ಕುಳಿತುಬಿಟ್ಟಿತು.

ಹುಲಿಯೊಂದನ್ನು ಹೀಗೆ ಹಂದಿಗಳು ಗುಂಪಾಗಿ ಅಟ್ಟಿಸಿಕೊಂಡು ಬಂದದ್ದನ್ನು, ಹುಲಿ ಹೆದರಿ ತನ್ನ ಮೇಲೇರಿ ಕುಳಿತಿದ್ದನ್ನು ಆ ಹೆಮ್ಮರ ಗಮನಿಸಿತು. 'ಒಗ್ಗಟ್ಟಿನಲ್ಲಿ ಎಂಥಾ ಬಲವಿದೆ! ಆದರೂ ಈ ಹಂದಿಗಳು ಹುಲಿಯನ್ನು ಕೊಲ್ಲಲಾಗುವುದಿಲ್ಲ. ಹಂದಿಗಳಿಗೆ ಮರ ಹತ್ತಲಾಗುವುದಿಲ್ಲ' ಎಂದು ಯೋಚಿಸಿತು. ಆಗ ದುಗ್ಗನ ಹಂದಿ, ತನ್ನ ಬಳಗದವರಿಗೆ 'ನೋಡಿ ಎಲ್ಲರೂ ಹಳ್ಳದೆಡೆಗೆ ಹೋಗಿ ಬಾಯಲ್ಲಿ ಎಷ್ಟು ಸಾಧ್ಯವೋ ಅಷ್ಟು ನೀರು ತುಂಬಿಕೊಂಡು ತಂದು ಈ ಮರದ ಬುಡಕ್ಕೆ ಹಾಕಿ. ನಂತರ ಕೋರೆ ದಾಡೆಗಳಿಂದ ಅದರ ಸುತ್ತಲೂ ಹೂಟಬಿಡಿ. ನಂತರ ಮರವನ್ನು ಜೋರಾಗಿ ಗುದ್ದಿ ಬೀಳಿಸೋಣ. ಆಮೇಲೆ ನಾನು ಆ ಹುಲಿಯ ಕಥೆ ನೋಡಿಕೊಳ್ಳುತ್ತೇನೆ' ಎಂದಿತು.

ಎಲ್ಲಾ ಹಂದಿಗಳು ಓಡೋಡಿ ಹೋಗಿ ಹಳ್ಳದಿಂದ ನೀರನ್ನು ಬಾಯಿಯಲ್ಲಿ ತುಂಬಿಕೊಂಡು ತಂದು ಮರದ ಬುಡಕ್ಕೆ ಸುರಿಯಲಾರಂಭಿಸಿದವು. ಮರಕ್ಕೆ ಭಯವಾಯಿತು. ಇಂದು ಈ ಹುಲಿಯ ದೆಸೆಯಿಂದ ನನಗೂ ಕೊನೆಗಾಲ ತಪ್ಪಿದ್ದಲ್ಲ ಅನ್ನಿಸಿ, ದಂಡನಾಯಕನಂತೆ ಹಂದಿಗಳಿಗೆ ನಿರ್ದೇಶನ ನೀಡುತ್ತಿದ್ದ ದೊಡ್ಡ ಹಂದಿಯನ್ನು ಉದ್ದೇಶಿಸಿ, 'ಅಯ್ಯಾ ಸೂಕರ ಮಹಾರಾಜನೆ, ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಇಂದು ಪ್ರತ್ಯಕ್ಷ ಕಾಣುತ್ತಿದ್ದೇನೆ. ಆದರೆ, ದಂಡನಾಯಕನಾದವನಿಗೆ, ಬಲಪ್ರದರ್ಶನದ ಜೊತೆಗೆ ವಿವೇಚನೆಯೂ ಬೇಕು. ಆ ಹುಲಿಗೋಸ್ಕರ ನನ್ನನ್ನು ಬಲಿಕೊಡುವುದು ಯಾವ ಧರ್ಮ?' ಎಂದಿತು. ಆಗ ದುಗ್ಗನ ಹಂದಿ, 'ನನಗೆ ಅದೆಲ್ಲಾ ಗೊತ್ತಿಲ್ಲ. ಇಂದು ಅದನ್ನು ಕೊಂದು, ನನ್ನಮ್ಮನ, ಬಳಗದವರ ಸಾವಿಗೆ ಸೇಡು ತೀರಿಸಿಕೊಳ್ಳಲೇಬೇಕು' ಎಂದಿತು. ಆಗ ಮರ 'ಅಯ್ಯಾ ಸೂಕರ ಮಹಾರಾಜನೆ, ನಮ್ಮಿಬ್ಬರಿಗೂ ಯಾವ ವೈರತ್ವವೂ ಇಲ್ಲವಷ್ಟೆ. ನಿನಗೆ ಹುಲಿ ತಾನೆ ಬೇಕಾಗಿರುವುದು. ನಿಮ್ಮವರಿಗೆ ನನ್ನ ಬುಡದ ಮಣ್ಣನ್ನು ಹೂಟಬೇಡ ಎಂದು ಹೇಳು. ನೀವೆಲ್ಲಾ ಸೇರಿಕೊಂಡು, ನನ್ನನ್ನು ಸ್ವಲ್ಪ ನಿಧಾನವಾಗಿ ಅಲುಗಿಸಿದರೆ ಸಾಕು. ನಾನು ಸ್ವಲ್ಪ ಮೈ ಕೊಡವಿಕೊಳ್ಳುತ್ತೇನೆ. ಹುಲಿ ಬಿದ್ದೇ ಬೀಳುತ್ತದೆ. ನಾನೂ ಉಳಿಯುತ್ತೇನೆ. ನಿಮ್ಮ ಆಸೆಯೂ ಈಡೇರುತ್ತದೆ' ಎಂದಿತು. ದುಗ್ಗನ ಹಂದಿಗೆ ಅದು ಸರಿಯೆನ್ನಿಸಿತು. ತನ್ನವರೊಂದಿಗೆ ಸೇರಿ ಮರವನ್ನು ನಿಧಾನವಾಗಿ ಅಲುಗಿಸತೊಡಗಿತು. ಮರವೂ ಸಹಕರಿಸಿ, ಹುಲಿಯಿದ್ದ ಕೊಂಬೆಯನ್ನು ಜೋರಾಗಿ ಅಲುಗಿಸಿತು. ಹಂದಿಗಳು ಮರ ಹತ್ತಲಾರವು ಎಂಬ ಧೈರ್ಯದಿಂದ ಕುಳಿತಿದ್ದ ಹುಲಿ ಮರದಿಂದ ದೊಪ್ಪನೆ ಬಿದ್ದು, ಹಂದಿಗಳ ತಿವಿತಕ್ಕೂ ಕಾಯದೆ ಸತ್ತೇ ಹೋಯಿತು. ಅಂದಿನಿಂದ ಆ ಮರದ ಸುತ್ತ ಮುತ್ತವೇ ನೆಲೆಸಿದ ಹಂದಿಗಳ ಸಮೂಹ ಮರಕ್ಕೆ ಒಳ್ಳೆಯ ಸ್ನೇಹಿತರಾಗಿ ಬಾಳಿದವು.